ಹಾಸನ ಕ್ಷೇತ್ರದ ವಿವಿಧ ಸಹಕಾರಿ ಸೊಸೈಟಿಗಳಲ್ಲಿ ಮತ್ತು ಸಹಕಾರ ಬ್ಯಾಂಕಿನಲ್ಲಿ ಹಣ ದುರುಪಯೋಗ ಆಗಿರುವುದರ ಬಗ್ಗೆ

2742 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಕ್ಷೇತ್ರದ ವಿವಿಧ ಸಹಕಾರ ಸೊಸೈಟಿಗಳಲ್ಲಿ ಮತ್ತು ಸಹಕಾರ ಬ್ಯಾಂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣ ದುರುಪಯೋಗವಾಗಿರುವುದು ತಿಳಿದು ಬಂದಿದೆ (ವಿವರಗಳನ್ನೊದಗಿಸುವುದು)

ಆ) ಹಣ ದುರುಪಯೋಗ ಮಾಡಿದ ಸಹಕಾರ ಸಂಸ್ಥಗಳ ಮೇಲೆ ಸರ್ಕಾರ ಕ್ರಮವೇನಾದರೂ ಕೈಗೊಂಡಿದೆಯೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ವಿವರಗಳನ್ನು ಲಗತ್ತಿಸಿದೆ

ಆ) ಇಲ್ಲ.

ಹಾಸನ ಕ್ಷೇತ್ರದ ಮೂರು ವರ್ಷದಲ್ಲಿ ಹಣ ದುರುಪಯೋಗವಾದ ಸಹಕಾರ ಸಂಘಗಳ ವಿವರಗಳು 1987-88ನೇ ಸಾಲಿನಲ್ಲಿ

ಕ್ರಮ ಸಂಖ್ಯೆ	*ಸಂಘದ ಹೆಸರು*	*ಹಣ ದುರುಪ ಯೋಗವಾದ ವರ್ಷ*	*ಹಣ ದುರುಪಯೋಗ ಪಡಿಸಿಕೊಂಡವರ ಹೆಸರು ಮತ್ತು ಹುದ್ದೆ*	*ಮೊಬಲಗು*
01	ರೈತ ಸೇವಾ ಸಹಕಾರ ಸಂಘ (ನಿ) ಗೋರೂರು	1987-88	ಕೆ.ವಿ. ದಾಸೇಗೌಡ	49,119-00
02	ಹೇಮಾವತಿ ಜಲಾಶಯ ನೌಕರರ ಬಳಕೆದಾರರ ಸಹಕಾರ ಸಂಘ.	1987-88	ಬಿ.ಟಿ. ಕೆಂಪೇಗೌಡ	49,655-00
03.	ಹಾಲು ಉತ್ಪಾದಕರ ಸಹಕಾರ ಸಂಘ (ನಿ) ನಾಗನಹಳ್ಳಿ	1987-88	ಎಸ್.ಬಿ.ರಂಗೇಗೌಡ ಕಾರ್ಯದರ್ಶಿ.	3,256-00
			ಒಟ್ಟು	**1,02,030-00**
		1988-89ನೇ ಸಾಲಿನಲ್ಲಿ		
01	ಹಾಸನ ಜಿಲ್ಲಾ ಕೇಂದ್ರ ಸಗಟು ಮಾರಾಟ ಸಂಸ್ಥೆ	1988-89 1988-89 –	ಎಸ್.ಎಲ್. ಲೋಕೇಶ್ ಮಾರಾಟ ಗುಮಾಸ್ತ ನಳಿನಿ, ಮಾ.ಗು. ಎಸ್.ಟಿ. ಚಂದ್ರಶೇಖಯ್ಯ ಬಿ.ಡಿ. ರಾಜಶೇಖರ್	2,650-00 3,307-00 2,590-00 1,081-00

02.	ಲೀಗಲ್ ಪ್ರಾಕ್ಟೀಶನರ್ ಸಹಕಾರ ಸಂಘ (ನಿ), ಹಾಸನ	-	ಕೆ.ಸಿ.ನಾಗಪ್ಪಶಾಸ್ತ್ರಿ ಮಾರಾಟ ಗೂಮಾಸ್ತೆ ಹೆಚ್.ಜಿ. ನಂಜಪ್ಪ, ಕಾರ್ಯದರ್ಶಿ ಶಾಹಿದಾ ಬೇಗಂ. ಮಾರಾಟ ಗುಮಾಸ್ತೆ	1,687-00 1,845-00 2,168-00
03.	ಇಂಜನಿಯರ್‌ಗಳ ಮತ್ತು ಟೆಕ್ನಿಷಿಯನ್‌ರ ಸಹಕಾರ ಸಂಘ, ಹಾಸನ	-	ಸಿ.ಕೆ. ಚಂದ್ರೆಗೌಡ ಉಗ್ರಾಣ ಪಾಲಕ	2,603-00
04.	ಹಾಲು ಉತ್ಪಾದಕರ ಸಹಕಾರ ಸಂಘ (ನಿ) ಕೌಶಿಕ	-	ಕೆ.ವಿ. ಸುಬ್ರಮಣ್ಯ ಮಾಜಿ ಕಾರ್ಯದರ್ಶಿ.	1,325-00
05.	ರೈತ ಸೇವಾ ಸಹಕಾರ ಸಂಘ, ಮೊಸಳೆಹೊಸಹಳ್ಳಿ	-	ದ್ಯಾವೇಗೌಡ, ಮಾ.ಗು.	25,196-00
06.	ಎಂ.ಪಿ.ಸಿ.ಎಸ್. ಮುತ್ತಿಗೇಹಿರಹಳ್ಳಿ	-	ಪುಟ್ಟಸ್ವಾಮಿ ಮಾಜಿ ಕಾರ್ಯದರ್ಶಿ	3,957-00
07.	ಎಂ.ಪಿ.ಸಿ.ಎಸ್. ಮಡೇನೂರು	-	ಕೃಷ್ಣಯ್ಯ, ಮಾಜಿ ಕಾರ್ಯದರ್ಶಿ	3,201-00
			ಒಟ್ಟು	**51,610-00**
01.	ಹಾಸನ ಜಿಲ್ಲಾ ಕೇಂದ್ರ ಸಗಟು ಮಾರಾಟ ಸಂಸ್ಥ	1989-90	ಎಸ್.ಎಲ್. ಲೋಕೇಶ್, ಮಾರಾಟ ಗುಮಾಸ್ತ ಡಿ.ಸಿ. ಚೇತನ. ಮಾ.ಗು.	2,753-00 1,375-00
02.	ಲೀಗಲ್ ಪ್ರಾಕ್ಟೀಷನರ್ಸ್ ಸಹಕಾರ ಸಂಘ, ಹಾಸನ	1989-90	ಹೆಚ್.ಬಿ. ನಂಜಪ್ಪ ಕಾರ್ಯದರ್ಶಿ	1,127-00
03.	ಹಾಲು ಉತ್ಪಾದಕರ ಸಹಕಾರ ಸಂಘ (ನಿ) ಮೂರನಹಳ್ಳಿ	1989-90	ಕರಿಬಸಪ್ಪ, ಕಾರ್ಯದರ್ಶಿ	19,100-00
04.	ರೈತ ಸೇವಾ ಸಹಕಾರ ಸಂಘ ಮೊಸಳೀಹೊಸಹಳ್ಳಿ	1989-90	ಕೆ.ಎಸ್. ಮಹೇಂದ್ರ ಮಾರಾಟ ಗುಮಾಸ್ತ	1,140-00
			ಒಟ್ಟು	**25,495-00**

ಹಾಸನ ಟೌನ್‌ನಲ್ಲಿ ಡಿವಿಜನಲ್ ವರ್ಕ್‌ಷಾಪ್ ಪ್ರಾರಂಭಿಸುವ ಬಗ್ಗೆ

2744 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಸಿಟಿಯಲ್ಲಿ ಒಂದು ಡಿವಿಜನಲ್ ವರ್ಕ್‌ಷಾಪ್ ಹಾಕಲು ಕೆ.ಎಸ್.ಆರ್.ಟಿ.ಸಿಯವರು ಹಾಸನ ಪಕ್ಕದ ಅಡುವಳಿ ಗ್ರಾಮದಲ್ಲಿ ಸುಮಾರು ತೊಂಭತ್ತು ಎಕರೆ ಜಮೀನನ್ನು ಸ್ವಾಧೀನಪಡಿಸಿ ಕೊಂಡಿರುವುದು ನಿಜವಲ್ಲವೇ?